**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ (ಕೆಜಿಎಫ್ ಪೀಠ)</u>**

**<u>ಎಸ್.ಸಿ. ಸಂಖ್ಯೆ: 94/2025</u>**

**CW-1**
**PW-1**

| | |
|---|---|
| | **ಸಾಕ್ಷಿಯನ್ನು ದಿಃ 11.11.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.** |
| **ಸಾಕ್ಷಿಯ ಹೆಸರು** | ವೆಂಕಟೇಶಪ್ಪ |
| **ಗಂಡನ ಹೆಸರು** | ಮುನಿಯಪ್ಪ |
| **ವಯಸ್ಸು** | 55 ವರ್ಷ |
| **ಉದ್ಯೋಗ** | ಕೂಲಿ ಕೆಲಸ |
| **ವಾಸಸ್ಥಳ** | ಕದಿರೇಗೌಡನ ಕೋಟೆ |

**<u>ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ-</u>**

ಚಾಸಾ-2 ನನ್ನ ಹೆಂಡತಿ. ಮೃತ ತ್ರಿವೇಣಿ ನನ್ನ ಮಗಳು. ಸುಮಾರು 20 ವರ್ಷಗಳ ಹಿಂದೆ ನನ್ನ ಮಗಳು ತ್ರಿವೇಣಿಯನ್ನು 1 ನೇ ಆರೋಪಿಗೆ ಕೊಟ್ಟು ಮದುವೆ ಮಾಡಿದ್ದೆವು. ಅವರಿಗೆ ಇಬ್ಬರು ಮಕ್ಕಳು ಇದ್ದರು. ಈಗ ನನ್ನ ಮಗಳು ತ್ರಿವೇಣಿ ಮತ್ತು ಆಕೆಯ ಇಬ್ಬರು ಮಕ್ಕಳು ಜೀವಂತ ಇರುವುದಿಲ್ಲ. ತ್ರಿವೇಣಿಗೆ ಹೊಟ್ಟೆ ನೋವು ಬರುತ್ತಾ ಇದ್ದು ಆಕೆ ಎನು ಮಾಡಿಕೊಂಡಳು ಎಂದು ನನಗೆ ಗೊತ್ತಿಲ್ಲ. ನನ್ನ ಮಗಳಿಗೆ ಹೊಟ್ಟೆ ನೋವು ಬರುತ್ತಾ ಇದುದ್ದರಿಂದ ನಾನು ಮತ್ತು ಆಕೆಯ ಗಂಡ 1 ನೇ ಆರೋಪಿ ಇಬ್ಬರು ಆಸ್ಪತ್ರೆಗೆ ತೋರಿಸುತ್ತಿದ್ದೆವು. 1 ನೇ ಆರೋಪಿಮತ್ತು ತ್ರೀವಣೆಯ ಇಬ್ಬರು ಮಕ್ಕಳು ಯಾವ ರೀತಿ ಮೃತಪಟ್ಟಳು ಎಂದು ನನಗೆ ಗೊತ್ತಿಲ್ಲ. ನನ್ನ ಮಗಳು ತ್ರಿವೇಣಿ ಬದುಕಿದ್ದ ಕಾಲಕ್ಕೆ 1 ನೇ ಆರೋಪಿ ಮತ್ತು ಆಕೆ ಇಬ್ಬರೂ ಚೆನ್ನಾಗಿದ್ದು ಯಾವುದೇ ವೈಶಮ್ಯ ಇರಲಿಲ್ಲ. 1 ನೇ ಆರೋಪಿ ನನ್ನ ಮಗಳು ತ್ರಿವೇಣಿಗೆ ಕಿರುಕುಳ ಕೊಡುತ್ತಿದ್ದ ಬಗ್ಗೆ ನನಗೆ ಯಾವುದೇ ವಿಷಯ ಗೊತ್ತಿಲ್ಲ. ನನಗೆ ಕನ್ನಡ ಭಾಷೆಯಲ್ಲಿ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಮಗಳು ಮೃತ ತ್ರಿವೇಣಿ ಅಂದರೆ ಈ ಕೇಸಿನ 2 ನೇ ಆರೋಪಿ ತನ್ನ ಇಬ್ಬರು ಮಕ್ಕಳನ್ನು ಕೊಲೆ ಮಾಡಿ ಸಾಯಿಸಿ ಆಕೆಯೂ ಸಹ ಸೀರೆಯಿಂದ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ ಎಂಬುದಾಗಿ ನಾನು ಪೊಲೀಸರಿಗೆ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ದೂರಿನಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ.

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಹೆಬ್ಬೆಟ್ಟಿನ ಗುರುತು ಮೂಲಕ ಸಹಿ ಮಾಡುತ್ತೇನೆ. ಪೊಲೀಸರು ಘಟನಾ ಸ್ಥಳಕ್ಕೆ ಬಂದಿರಲಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ. ಅದೇ ರೀತಿ ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತು ಅಥವಾ ಸೀರೆಯನ್ನು

ಅಮಾನತ್ತುಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ 2 ಸೀರೆಯ ತುಂಡುಗಳನ್ನು ನಾನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ. ಸದರಿ ದೂರು ಮತ್ತು ಪಂಚನಾಮೆಯಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ-**

ದಿಃ 21-12-2024 ರಂದು ಶನಿವಾರ ನನ್ನ ಮೊಮ್ಮಗಳನ್ನು ಸ್ಕೂಲ್ ಮುಗಿದ ನಂತರ ನಾನು ಕರೆದುಕೊಂಡು ಹೋಗಿ ಅವ ರ ತಂದೆ-ತಾಯಿ ಬಳಿ ಕಮ್ಮಸಂದ್ರದಲ್ಲಿ ಬಿಟ್ಟು ದಿಃ 22-12-2024 ರಂದು ಸಂಜೆ ಸುಮಾರು 5-00 ಗಂಟೆಗೆ ನಾನು ನನ್ನ ಮಗಳ ಮನೆಗೆ ಹೋಗಿ ಮೌನಿಷಾ ಳನ್ನು ಮನೆಗೆ ಕರೆದುಕೊಂಡು ಹೋದೆನು ಎಂದರೆ ಸರಿಯಲ್ಲ. ನಂತರ ಅ ದಿನ ನನ್ನ ಮೊಮ್ಮಗಳು ನನ್ನ ಮತ್ತು ನನ್ನ ಹೆಂಡತಿಯ ಬಳಿ ತಿಳಿಸಲಾಗಿ ನನಗೆ ತಿಳಿದು ಬಂದ ವಿಚಾರವೇನೆಂದರೆ ನಮ್ಮ ತಂದೆ ನಮ್ಮ ತಾಯಿಯೊಂದಿಗೆ ಜಗಳ ಮಾಡಿ ಹೊಡೆದು ನೀನು ಬದುಕಿರುವುದಕ್ಕಿಂತ ಸಾಯುವುದೇ ಮೇಲು ನೀನು ಸತ್ತು ಹೋಗಿ ಎಂದು ಬೈದಿದ್ದಾಗಿ ನನ್ನ ಮೊಮ್ಮಗಳು ನನಗೆ ತಿಳಿಸಿದಳು ಎಂದರೆ ಸರಿಯಲ್ಲ. ಆಗ ನಾನು ಗಂಡ-ಹೆಂಡತಿ ಜಗಳ ಸಂಸಾರದಲ್ಲಿ ಸಾಮಾನ್ಯ ಎಂದು ಸುಮ್ಮನಾದೆನು ಎಂದರೆ ಸರಿಯಲ್ಲ.

ನಂತರ ದಿಃ 23-12-24 ರಂದು ತ್ರಿವೇಣಿ ದರ್ಮಸ್ಥಳ ಮಹಿಳಾ ಸಂಘದ ಚೀಟಿ ಕಟ್ಟಬೇಕು ಎಂದು ಕೇಳಿದ್ದರಿಂದ ನಾನು 4000 ರೂ.ಗಳನ್ನು ಕೊಟ್ಟು ಸಹಾಯ ಮಾಡಿದ್ದು ದಿಃ 24-12-2024 ರಂದು ಸಂಜೆ ನನ್ನ ಮೊಮ್ಮಗಳನ್ನು ಕಮ್ಮಸಂದ್ರ ಗ್ರಾಮಕ್ಕೆ ಕರೆದುಕೊಂಡು ಹೋಗಿ ಮಗಳ ಮನೆಯಲ್ಲಿ ಬಿಟ್ಟು ಬಂದಿದ್ದೆನು ಎಂದರೆ ಸರಿಯಲ್ಲ. ಈಗಿರುವಾಗ ದಿಃ 25-12-2024 ರಂದು ಬೆಳಿಗ್ಗೆ 8-00 ಗಂಟೆಗೆ ನಾನು ಅಗಾಪೇ ಶಾಲೆಯ ಬಳಿ ವಾಚ್ ಮ್ಯಾನ್ ಕೆಲಸದಲ್ಲಿ ಇದ್ದಾಗ ನಮ್ಮ ಗ್ರಾಮದ ನಿವಾಸಿ ಅಭಿ ಬಿನ್ ಚಿನ್ನಪ್ಪಯ್ಯ ಎಂಬುವವರು ನನ್ನ ಬಳಿ ಬಂದು ತ್ರಿವೇಣಿಗೆ ಮೈಯಲ್ಲಿ ಉಷಾರಿಲ್ಲ ಎಂದು ನನಗೆ ತಿಳಿಸಿದ ಕೂಡಲೇ ನಾನು ಶಾಲೆಯಿಂದ ನಡೆದುಕೊಂಡು ಕಮ್ಮಸಂದ್ರಕ್ಕೆ ಬಂದು ನನ್ನ ಮಗಳ ಮನೆಯಲ್ಲಿ ನೋಡಿದಾಗ ಅಲ್ಲಿ ಗ್ರಾಮಸ್ಥರು ಸೇರಿದ್ದು ಮನೆಯ ಹಾಲ್ ನಲ್ಲಿ ನನ್ನ ಮಗಳು ತ್ರಿವೇಣಿ ರವರ ಮೃತದೇಹವನ್ನು ಹಾಗೂ ನನ್ನ ಮೊಮ್ಮಕ್ಕಳಾದ ಮೌನಿಷ ಮತ್ತು ನಿತೀನ್ ರವರ ಮೃತದೇಹಗಳನ್ನು ದಿವಾನದ ಮೇಲೆ ಮಲಗಿಸಿದ್ದರು ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಸೇರಿದ್ದವರನ್ನು ವಿಚಾರಿಸಲಾಗಿ ನನ್ನ ಮಗಳು ಅಕೆಯ ಮಕ್ಕಳೊಂದಿಗೆ ಮನೆಯಲ್ಲಿ ನೇಣು ಹಾಕಿಕೊಂಡಿದ್ದಾಗಿ ತಿಳಿಸಿದರು ಎಂದರೆ ಸರಿಯಲ್ಲ. ನನ್ನ ಅಳಿಯ 1 ನೇ ಆರೋಪಿ ಮಣಿ ಈತನು

ಯಾವುದೋ ವಿಚಾರದಲ್ಲಿ ಮನೆಯಲ್ಲಿ ಹೆಂಡತಿ ಮಕ್ಕಳ ಮೇಲೆ ಗಲಾಟೆ ಮಾಡಿದ್ದರಿಂದ ದಿಃ 24-12-2024 ರಂದು ರಾತ್ರಿ ಯಾವುದೋ ಸಮಯದಲ್ಲಿ ನನ್ನ ಮಗಳು ತ್ರಿವೇಣಿ ಅಕೆಯ ಇಬ್ಬರು



ಮಕ್ಕಳನ್ನು ನೇಣು ಹಾಕಿ ಸಾಯಿಸಿ ಆಕೆಯೂ ಸಹ ನೇಣು ಹಾಕಿಕೊಂಡು ಸತ್ತುಹೋಗಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ಮಗಳನ್ನು ಅಕೆಯ ಗಂಡ 1 ನೇ ಆರೋಪಿ ಸತ್ತು ಹೋಗು ಎಂದು ಹೇಳಿ ಬೈದಿದ್ದರಿಂದ ಅಕೆಯು ತನ್ನ ಮಕ್ಕಳನ್ನು ನೇಣು ಹಾಕಿ ಸಾಯಿಸಿ ಆಕೆಯೂ ಸಹ ನೇಣು ಹಾಕಿಕೊಂಡು ಸತ್ತುಹೋಗಿರುತ್ತಾಳೆ ಎಂದರೆ ಸರಿಯಲ್ಲ. ಆದ್ದರಿಂದ ನಮ್ಮ ಮಗಳ ಸಾವಿಗೆ ಕಾರಣನಾದ ನನ್ನ ಅಳಿಯ 1 ನೇ ಆರೋಪಿ ಮಣಿ ಮತ್ತು ನನ್ನ ಮೊಮ್ಮಕ್ಕಳ ಸಾವಿಗೆ ಕಾರಣರಾದ ತ್ರೀವೇಣಿ ರವರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು - ಈಗ ನನಗೆ ಓದಿ ಹೇಳಿದ ರೀತ್ಯಾ ಪೊಲೀಸರಿಗೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ನಾನು ದೂರು ಕೊಟ್ಟ ನಂತರ ಬೆಮೆಲ್ ನಗರ ಪೊಲೀಸರು ದಿಃ 26-12-2024 ರಂದು ಘಟನಾ ಸ್ಥಳಕ್ಕೆ ಬಂದು ಸ್ಥಳ ಪರಿಶೀಲನೆ ಮಾಡಿದ್ದು ಅ ಸಮಯದಲ್ಲಿ ಚಾಸಾ-6 ಮತ್ತು 7 ರವರು ಸ್ಥಳದಲ್ಲಿ ಹಾಜರಿದ್ದು ಪೊಲೀಸರು ನಮ್ಮ ಸಮಕ್ಷಮ ಬೆಳಿಗ್ಗೆ 11-45 ರಿಂದ ಮದ್ಯಾಹ್ನ 1-15 ಗಂಟೆಯವರೆಗೆ ಸ್ಥಳ ಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಕಾಲಕ್ಕೆ ಪೊಲೀಸರು ನನ್ನ ಮಗಳು ತ್ರಿವೇಣಿ ತನ್ನ ಇಬ್ಬರು ಮಕ್ಕಳನ್ನು ನೇಣು ಹಾಕಿ ಸಾಯಿಸಲು ಮತ್ತು ತಾನು ಸಹ ನೇಣು ಹಾಕಿಕೊಂಡು ಸಾಯಲು ಉಪಯೋಗಿಸಿದ್ದ 2 ಸೀರೆಯ ತುಂಡುಗಳನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ರೀತ್ಯಾ ನಾನೇ ಪೊಲೀಸರಿಗೆ ಮಾಹಿಡಿ ನೀಡಿ ದೂರು ನೀಡಿದ್ದರೂ ಮತ್ತು ನನ್ನ ಸಮಕ್ಷಮ ಪೊಲೀಸರು ಸ್ಥಳದಲ್ಲಿ ಪಂಚನಾಮೆ ಮಾಡಿದ್ದರೂ ಸಹ ಈಗ 1 ನೇ ಅರೋಪಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ನೇ ಅರೋಪಿ ಪರ ಶ್ರೀ ಕೆ ಅರ್ ವಿ ವಕೀಲರಿಂದಃ-</u>**

ಅರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**<u>ಮರುವಿಚಾರಣೆ ಇಲ್ಲ</u>**
**<u>ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.</u>**

ಓ ಹೇ ಕೇ ಸರಿ ಇದೆ,

Sd/-

**(ಶಿವಕುಮಾರ.ಬಿ)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

**ಕೋಲಾರ ಕೆ.ಜಿ.ಎಫ್(ಪೀಠ)**

**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ (ಕೆಜಿಎಫ್ ಪೀಠ)**

**ಎಸ್.ಸಿ. ಸಂಖ್ಯೆ:94 /2025**

**CW-2**
**PW-2**

| | |
|---|---|
| | **ಸಾಕ್ಷಿಯನ್ನು ದಿಃ 11.11.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.** |
| **ಸಾಕ್ಷಿಯ ಹೆಸರು** | ನಾರಾಯಣಮ್ಮ |
| **ಗಂಡನ ಹೆಸರು** | ವೆಂಕಟೇಶಪ್ಪ |
| **ವಯಸ್ಸು** | 55 ವರ್ಷ |
| **ಉದ್ಯೋಗ** | ಕೂಲಿ ಕೆಲಸ |
| **ವಾಸಸ್ಥಳ** | ಕದಿರೇಗೌಡನಕೋಟೆ |

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ-**

ಚಾಸಾ-1 ನನ್ನ ಗಂಡ. ಮೃತ ತ್ರಿವೇಣಿ ನನ್ನ ಮಗಳು. ಮೃತ ಮೋನಿಷಾ ಮತ್ತು ನಿತೀನ್ ನನ್ನ ಮೊಮ್ಮಕ್ಕಳು. ಈಗ ನನ್ನ ಮಗಳು ತ್ರಿವೇಣಿ ಮತ್ತು ಆಕೆಯ ಇಬ್ಬರು ಮಕ್ಕಳು ಜೀವಂತ ಇರುವುದಿಲ್ಲ. ನನ್ನ ಮಗಳು ಮತ್ತು ಇಬ್ಬರು ಮೊಮ್ಮಕ್ಕಳು ಯಾವ ರೀತಿ ಮೃತಪಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ಅಂದಾಜು 20 ವರ್ಷಗಳ ಹಿಂದೆ ನನ್ನ ಮಗಳು ತ್ರಿವೇಣಿಯನ್ನು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಗೆ ಮದುವೆ ಮಾಡಿಕೊಟ್ಟಿದ್ದೆವು. ಮದುವೆಯಾದ ನಂತರ ಗಂಡ ಹೆಂಡತಿ ಇಬ್ಬರು ಅನೋನ್ಯವಾಗಿದ್ದು ಅವರಿಬ್ಬರ ನಡುವೆ ಯಾವುದೇ ಜಗಳ ಅಥವಾ ಮನಸ್ತಾಪಗಳು ಇರಲಿಲ್ಲ. ನನ್ನ ಮಗಳು ತ್ರಿವೇಣಿಗೆ ಆಗಾಗ ಹೊಟ್ಟೆ ನೋವು ಬರುತ್ತಿದ್ದು ಆಕೆಯನ್ನು ಆಸ್ಪತ್ರೆಗೆ ತೋರಿಸುತ್ತಿದ್ದೆವು.

ಅಂದಾಜು ಒಂದು ವರ್ಷದ ಹಿಂದೆ ನಾನು ಮನೆಯಲ್ಲಿ ಇದ್ದಾಗ ಯಾರೋ ಒಬ್ಬರು ನಿಮ್ಮ ಮಗಳು ತೀರಕೊಂಡಿದ್ದಾಳೆ ಬನ್ನಿ ಎಂಬುದಾಗಿ ತಿಳಿಸಿದರು. ನಂತರ ನಾನು ಮತ್ತು ನನ್ನ ಗಂಡ ನನ್ನ ಮಗಳ ಮನೆಯ ಬಳಿ ಹೋದೆವು. ಮನೆಗೆ ಹೋಗಿ ನೋಡಲಾಗಿ ನನ್ನ ಮಗಳು ತ್ರಿವೇಣಿ ಮತ್ತು ನನ್ನ ಇಬ್ಬರು ಮೊಮ್ಮಕ್ಕಳು ಮೃತಪಟ್ಟಿದ್ದರು. ನಾವು ಸ್ಥಳಕ್ಕೆ ಹೋಗುವಷ್ಟರಲ್ಲಿ ಪೊಲೀಸರು ಅಲ್ಲಿಗೆ ಬಂದಿದ್ದರು. ನಂತರ ನನ್ನ ಮಗಳ ಮತ್ತು ಮೊಮ್ಮಕ್ಕಳ ಮೃತದೇಹಗಳನ್ನು ಒಂದು ಅಂಬ್ಯುಲೆನ್ಸ್ ವಾಹನದಲ್ಲಿ ಕೋಲಾರದ ಎಸ್ ಎನ್ ಆರ್ ಜಿಲ್ಲಾ ಆಸ್ಪತ್ರೆಗೆ ಸಾಗಿಸಿದರು. ಆದರೆ ಸದರಿ ಆಸ್ಪತ್ರೆಯಲ್ಲಿ ಪೊಲೀಸರು ಎನು ದಾಖಲೆಯನ್ನು ಬರವಣಿಗೆ ಮಾಡಿದರು ಎಂದು ನನಗೆ ಗೊತ್ತಿಲ್ಲ. ಆದರೆ ಒಂದು ದಾಖಲೆಗೆ ಪೊಲೀಸರು ಆಸ್ಪತ್ರೆಯ ಬಳಿ ನನ್ನ ಹೆಬ್ಬೆಟ್ಟಿನ ಗುರುತು ಪಡೆದುಕೊಂಡರು.

**(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ-**

ದಿಃ 25-12-2024 ರಂದು ಸಂಜೆ 7-00 ಗಂಟೆ ಸಮಯದಲ್ಲಿ ಬೆಮೆಲ್ ನಗರ ಪೊಲೀಸರು ನನ್ನ ಮಗಳಾದ ತ್ರಿವೇಣಿ ಮತ್ತು ನನ್ನ ಮೊಮ್ಮಕ್ಕಳಾದ ಮೋನಿಷಾ ಮತ್ತು ನಿತೀನ್ ರವರ ಮೃತದೇಹಗಳ ಬಗ್ಗೆ ಎಸ್ ಎನ್ ಅರ್ ಅಸ್ಪತ್ರೆಯ ಶವಗಾರದಲ್ಲಿ ಪೊಲೀಸರು ಶವಪಂಚನಾಮೆ ಮಾಡಿ ಸದರಿ ಮೃತದೇಹಗಳನ್ನು ಪರಿಶೀಲಿಸಿ ನನ್ನ ಸಹಿಗಳನ್ನು ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಎನು ಬರೆದುಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಶವಪಂಚನಾಮೆ ಕಾಲಕ್ಕೆ ಚಾಸಾ-14 ಮತ್ತು 15 ರವರು ಸಹ ಹಾಜರಿದ್ದು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ ಮಹಜರ್ ಕಾಲಕ್ಕೆ ಚಾಸಾ-16 ಮತ್ತು 17 ರವರೂ ಸಹ ಹಾಜರಿದ್ದು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಶವಪಂಚನಾಮೆ ಮಾಡಿದ್ದರೂ ಮತ್ತು ಸದರಿ ವಿಚಾರಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಈಗ 1 ನೇ ಅರೋಪಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಕೆ ಅರ್ ವಿ ವಕೀಲರಿಂದಃ-**

ಅರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರುವಿಚಾರಣೆ ಇಲ್ಲ**

**ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ,

Sd/-

**(ಶಿವಕುಮಾರ.ಬಿ)**

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೋಲಾರ ಕೆ.ಜಿ.ಎಫ್(ಪೀಠ)